# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **2785** |
| ಸದಸ್ಯರ ಹೆಸರು | : | ಶ್ರೀ ಮುನಿರಾಜು ಗೌಡ ಪಿ.ಎಂ<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 28-03-2022 |
| ಉತ್ತರಿಸುವ ಸಚಿವರು | : | ಮಾನ್ಯ ಇಂಧನ ಹಾಗೂ ಕನ್ನಡ<br>ಮತ್ತು ಸಂಸ್ಕೃತಿ ಸಚಿವರು |

***

| | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರದ ರಸ್ತೆಗಳ ಫುಟ್‌ಪಾತ್‌ಗಳಲ್ಲಿ ಪಾದಚಾರಿಗಳ ಸಂಚಾರಕ್ಕೆ ಅಡಚಣೆ ಉಂಟು ಮಾಡುತ್ತಿರುವ ಟ್ರಾನ್ಸ್‌ಫಾರ್ಮರ್‌ಗಳನ್ನು ಸ್ಥಳಾಂತರಿಸುವ ಅವಶ್ಯಕತೆ ಇದೆ ಎಂದು ಗುರುತಿಸಲಾಗಿರುವ ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳ ಒಟ್ಟು ಸಂಖ್ಯೆ ಎಷ್ಟು; | ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ವ್ಯಾಪ್ತಿಯಲ್ಲಿ ಬೆಂಗಳೂರು ನಗರದ ರಸ್ತೆಗಳ ಸಾರ್ವಜನಿಕ ಪಾದಚಾರಿ ಮಾರ್ಗ (Footpath) ಗಳ ಮೇಲೆ ಕಾರ್ಯ ನಿರ್ವಹಿಸುತ್ತಿದ್ದ ಪರಿವರ್ತಕಗಳನ್ನು ಬೇರೆಡೆಗೆ ಸ್ಥಳಾಂತರಿಸಲು ಸ್ಥಳಾವಕಾಶ ಸಿಗದ ಕಾರಣ ಸದರಿ ವಿದ್ಯುತ್ ಪರಿವರ್ತಕ ಕೇಂದ್ರಗಳಿಂದ ಅಪಾಯಗಳನ್ನು ತಪ್ಪಿಸಲು ಸುರಕ್ಷತಾ ಕ್ರಮಗಳನ್ನು ಕೈಗೊಂಡು ಸದರಿ ಪರಿವರ್ತಕ ಕೇಂದ್ರಗಳನ್ನು ಬೆವಿಕಂನಲ್ಲಿ ಸಿದ್ಧಪಡಿಸಿರುವ ಹೊಸ ವಿನ್ಯಾಸಕ್ಕೆ ಬದಲಾಯಿಸಲಾಗಿರುತ್ತದೆ.<br><br>ಬೆಂಗಳೂರು ನಗರದಲ್ಲಿ ಪಾದಚಾರಿ ಮಾರ್ಗದಲ್ಲಿ ಗುರುತಿಸಲಾಗಿದ್ದ 5741 ಸಂಖ್ಯೆಯ ಪರಿವರ್ತಕಗಳ ಪೈಕಿ 3196 ಸಂಖ್ಯೆಯ ಪರಿವರ್ತಕ ಕೇಂದ್ರಗಳನ್ನು ಹೊಸ ವಿನ್ಯಾಸಕ್ಕೆ ಪರಿವರ್ತಿಸುವ ಕಾಮಗಾರಿ ಹಾಗೂ 2 ಸಂಖ್ಯೆ ಪಾದಚಾರಿ ಮಾರ್ಗದಿಂದ ಬೇರೆ ಸ್ಥಳಕ್ಕೆ ಸ್ಥಳಾಂತರಿಸಲಾಗಿರುವ ಕಾಮಗಾರಿಗಳನ್ನು ಸೆಪ್ಟೆಂಬರ್-2017ರಲ್ಲಿ ಕೈಗೆತ್ತಿಗೊಂಡು ದಿನಾಂಕ:30.09.2019ರಲ್ಲಿ ಕಾಮಗಾರಿಯ ಮೊದಲನೇ ಹಂತದಲ್ಲಿ ಪೂರ್ಣಗೊಳಿಸಲಾಗಿರುತ್ತದೆ. ಸದರಿ ಕಾಮಗಾರಿಗೆ ತಗುಲಿದ ವೆಚ್ಚ ರೂ.164.59 ಕೋಟಿಗಳು.<br><br>ಹಂತ-2 ರಲ್ಲಿ, ಬಾಕಿ ಉಳಿದಿರುವ 2543 ಸಂಖ್ಯೆ ಪರಿವರ್ತಕ ಕೇಂದ್ರಗಳನ್ನು ಹೊಸ ವಿನ್ಯಾಸಕ್ಕೆ ಬದಲಾಯಿಸುವ ಮತ್ತು ಸ್ಥಳಾಂತರಿಸುವ ಕಾಮಗಾರಿಗಳಿಗೆ ಹಾಗೂ 2021-22ನೇ ಸಾಲಿನಲ್ಲಿ ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಪಾದಚಾರಿ ಪರಿವರ್ತಕ ಕೇಂದ್ರಗಳ ಸರ್ವೇ ಕಾರ್ಯ ಕೈಗೊಂಡು ಹೊಸದಾಗಿ ಗುರುತಿಸಿರುವ ಟ್ರಾನ್ಸ್ ಫಾರ್ಮರ್ ಗಳನ್ನೂ ಒಳಗೊಂಡಂತೆ ಒಟ್ಟು 2588 ಪರಿವರ್ತಕ ಕೇಂದ್ರಗಳ ಸ್ಥಳಾಂತರಿಸುವ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಿ ಎಲ್-1 ಬಿಡ್ಡುದಾರರಿಗೆ ಆಶಯ ಪತ್ರ (Letter of Intent) ನೀಡಲಾಗಿದೆ. ದರ ಗುತ್ತಿಗೆ ಆದೇಶ ನೀಡಿದ ನಂತರ ಕಾಮಗಾರಿಯನ್ನು ಆರಂಭಿಸಲಾಗುವುದು. |
| ಆ) | ಈ ಪೈಕಿ ಇಲ್ಲಿಯವರೆಗೆ ಒಟ್ಟು ಎಷ್ಟು ಟ್ರಾನ್ಸ್‌ಫಾರ್ಮರ್‌ಗಳನ್ನು ಸ್ಥಳಾಂತರಿಸಲಾಗಿದೆ; ಸ್ಥಳಾಂತರಿಸಬೇಕಾಗಿರುವ ಟ್ರಾನ್ಸ್‌ಫಾರ್ಮರ್‌ಗಳ ಸಂಖ್ಯೆ ಎಷ್ಟು; | |
| ಇ) | ಟ್ರಾನ್ಸ್‌ಫಾರ್ಮರ್‌ಗಳ ಸ್ಥಳಾಂತರ ಕಾರ್ಯಾಚರಣೆಗೆ ಇಲ್ಲಿಯವರೆಗೆ ಆಗಿರುವ ಒಟ್ಟು ವೆಚ್ಚ ಎಷ್ಟು? | |

ಸಂಖ್ಯೆ: ಎನರ್ಜಿ 86 ಇಬಿಎಸ್ 2022

(ವಿ ಸುನೀಲ್ ಕುಮಾರ್)
ಮಾನ್ಯ ಇಂಧನ ಹಾಗೂ ಕನ್ನಡ
ಮತ್ತು ಸಂಸ್ಕೃತಿ ಸಚಿವರು